**(ದಿನಾಂಕ 12.11.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ ಕೆ ಎಂ ವಕೀಲರಿಂದಃ-**

ದಾವಾ ಆಸ್ತಿ ಕಾಳಮ್ಮ ದೇವಸ್ಥಾನಕ್ಕೆ ಸಂಬಂಧಿಸಿದ ಆಸ್ತಿ ಎಂದರೆ ಸರಿಯಲ್ಲ. ಸರ್ವೆ ನಂಬರ 539/ಬಿ ಆಸ್ತಿಯ ಒಳಗೆ ಬೇಲ್ದಾರ್ ಲಕ್ಷ್ಮಯ್ಯನಿಗೆ ಪಟ್ಟಾ ಕೊಡಲು ಯಾವುದೇ ಆಸ್ತಿ ಉಳಿದಿಲ್ಲಾ ಎಂದರೆ ಸರಿಯಲ್ಲ. ಕಾಳಮ್ಮ ದೇವಸ್ಥಾನಕ್ಕೆ ಸರ್ವೆ ನಂಬರ 539/ಬಿ ರಲ್ಲಿ ಒಟ್ಟು 186 ಎಕರೆ 6 ಸೆಂಟ್ಸ್ ಇತ್ತು ಎಂದರೆ ಸರಿ. ಅದರ ಒಳಗೆ 15 ಎಕರೆ 40 ಸೆಂಟ್ಸ್ ಆಸ್ತಿಯನ್ನು ಬಳ್ಳಾರಿಯ ಜಿಲ್ಲಾಧಿಕಾರಿಯವರು ಅದನ್ನು ವಿಭಾಗ ಮಾಡಿ ಜೈನ ದೇವಸ್ಥಾನ, ಕಾಳಮ್ಮ ದೇವಸ್ಥಾನ ಮತ್ತು ಆಂಜನೇಯ ದೇವಸ್ಥಾನಕ್ಕೆ ಹಂಚಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿ 2ನೇ ಪ್ರತಿವಾದಿಯ ಸ್ವಾಧೀನ ಅನುಭವದಲ್ಲಿ ಇದೆ ಎಂದರೆ ಸರಿಯಲ್ಲ. 1962 ರಲ್ಲಿ 2ನೇ ಪ್ರತಿವಾದಿಗೆ ಸರ್ಕಾರದವರು ಪಟ್ಟಾ ಕೊಟ್ಟಾಗಿನಿಂದ ಸ್ವಾಧೀನದಲ್ಲಿ 2ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆ ಮಾಡಿ ಅದರ ಸುತ್ತಾ ತಂತಿ ಬೇಲಿ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಣಗೆರೆ ಜಿಲ್ಲಾಧಿಕಾರಿ, ಇ ಓ ಹರಪನಹಳ್ಳಿ, ತಹಶೀಲ್ದಾರರು ಹರಪನಹಳ್ಳಿ, ಮತ್ತು ಬಡಿಗೇರ್ ಈಶಣ್ಣ, ಮುಖ್ಯ ಕಾರ್ಯದರ್ಶಿ ವಿಧಾನ ಸೌಧ ಇವರಿಗೆ ಅಧ್ಯಕ್ಷರು ಕೋಟೆ ಆಂಜನೇಯ ಸ್ವಾಮಿ ಹರಪನಹಳ್ಳಿ ರವರ ವಿರುದ್ಧ ನಿರ್ಭಂಧಕಾಜ್ಞೆ ಕೋರಿ ಮತ್ತೊಂದು ದಾವೆ ಹೂಡಿದ್ದೇ ಅದು ಓ ಎಸ್ ನಂಬರ 61/2008 ಅಂತ ನಡೆದಿತ್ತು ಎಂದರೆ ಸರಿಯಲ್ಲ. ಓ ಎಸ್ ನಂಬರ 61/2008 ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿ ನಾನು ದಾವಾ ಆಸ್ತಿಯ ಮಾಲೀಕ ಅಲ್ಲಾ ಅಂತಾ ಅಲ್ಲಗಳೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮಾಡಲು ಬಹಳ ದಿನಾಂಕ ಗಳನ್ನು ಕೂಡ ನನಗೆ ನ್ಯಾಯಾಲಯ ನಿಗದಿಪಡಿಸಿತ್ತು ಎಂದರೆ ಸರಿಯಲ್ಲ. ಸಾಕಷ್ಟು ಸಮಯ ನೀಡಿದ್ದರೂ ಸಹ ಸಾಕ್ಷಿ ನುಡಿಯದ ಕಾರಣ ಸದರಿ ದಾವಾ

28.03.2012 ರಂದು ವಜಾ ಗೊಂಡಿತ್ತು ಎಂದರೆ ಸರಿಯಲ್ಲ. ದಾವಾ ವಜಾ ಆದ ನಂತರ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲಾ ಎಂದರೆ ಗೊತ್ತಿಲ್ಲಾ. ಎಲ್ಲಾ ವಿಚಾರವನ್ನು ಮುಚ್ಚಿಟ್ಟು ನಾನು ಮತ್ತು ನನ್ನ ಹೆಂಡತಿ ಈ ಹೊಸ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತಹಶೀಲ್ದಾರ, ಜಿಲ್ಲಾಧಿಕಾರಿ ಮತ್ತು ಪುರಸಭೆಯ ಮುಖ್ಯಾಧಿಕಾರಿಗಳನ್ನು ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಕಾಳಮ್ಮ ದೇವಸ್ಥಾನಕ್ಕೆ ಸಂಬಂಧಿಸಿದ ದಾವಾ ಆಸ್ತಿ ಯಲ್ಲಿ ನಾನು ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕಟ್ಟಡ ಕಟ್ಟಲು ಪುರಸಭೆಯಿಂದ ಯಾವುದೇ ಪರವಾನಿಗೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. 01.12.2014 ರಲ್ಲಿ ಪುರಸಭೆಯವರು ಅನಧಿಕೃತ ಕಟ್ಟಡ ಅಂತಾ ಅದನ್ನು ತೆರವುಗೊಳಿರುತ್ತಾರೆ ಎಂದರೆ ಸರಿಯಲ್ಲ. ನಾನು ರಿಟ್ ಪಿಟಿಶನ್ ನಂಬರ 55516/2014 ನ್ನು ಮತ್ತು 55633/2014 ದಾಖಲಿಸಿದ್ದೆ ಎಂದರೆ ಗೊತ್ತಿಲ್ಲಾ. ಸದರಿ ರಿಟ್ ಪಿಟಿಶನ್ ನಲ್ಲಿ ಪುಸಭೆಯವರು ಕಟ್ಟಡ ತೆರವು ಗೊಳಿಸಿದ ಬಗ್ಗೆ ತಿಳಿಸಿದ್ದೆ ಎಂದರೆ ಸರಿ. ಪುರಸಭೆಯವವರು ನನ್ನ ನ್ನು ತೆರವುಗೊಳಿಸಿದ ನಂತರ ದಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲಾ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳನ್ನು ಮುಚ್ಚಿಟ್ಟು ತಪ್ಪು ಮಾಹಿತಿ ನೀಡಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 539/ಬಿ/1ಬಿ ರಲ್ಲಿ ಬೇಲ್ದಾರ ಲಕ್ಷ್ಮಪ್ಪನಿಗೆ ದಿನಾಂಕ 05.09.1981 ರಲ್ಲಿ ಪಟ್ಟಾ ಕೊಡಲು ಸರ್ಕಾರದಲ್ಲಿ ಯಾವುದೇ ಜಾಗ ಉಳಿದಿರಲಿಲ್ಲ ಎಂದರೆ ಸರಿಯಲ್ಲ. ಬಳ್ಳಾರಿಯ ಜಿಲ್ಲಾಧಿಕಾರಿಯವರು ದಿನಾಂಕ 12.06.1962 ರಲ್ಲಿ ಕಾಳಮ್ಮ ದೇವಸ್ಥಾಕ್ಕೆ ಪಟ್ಟಾ ಕೊಟ್ಟ ನಂತರ ಬೆಲ್ದಾರ್ ಲಕ್ಷ್ಮಯ್ಯನಿಗೆ ಕೊಡಲು ಯಾವುದೇ ಬೂಮಿ ಇರಲಿಲ್ಲ ಮತ್ತು ಸ್ವಾಧೀನ ಕೂಡ ಕೊಟ್ಟಿಲ್ಲಾ ಎಂದರೆ ಸರಿಯಲ್ಲ. ಬೇಲ್ದಾರ ಲಕ್ಷ್ಮಯ್ಯನಿಗೆ

ಕೊಟ್ಟಿರುವ ಪಟ್ಟ ಕೇವಲ ಕಾಗದಲ್ಲಿ ಇದೆ ಅಸ್ತಿತ್ವದಲ್ಲಿ ಇಲ್ಲಾ ಎಂದರೆ ಸರಿಯಲ್ಲ. ಸದರಿ ಪಟ್ಟಾ ದಿಂದ ಬೇಲ್ದಾರ ಲಕ್ಷ್ಮಯ್ಯನಿಗೆ ಯಾವುದೇ ಹಕ್ಕು ಪ್ರಾಪ್ತ ಆಗಿಲ್ಲಾ ಎಂದರೆ ಸರಿಯಲ್ಲ. ಬೇಲ್ದಾರ ಲಕ್ಷ್ಮಯ್ಯನಿಗೆ ದಿನಾಂಕ 20.11.1999 ರಲ್ಲಿ ತನಗೆ ಆಸ್ತಿ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಹೀಗಾಗಿ ಬೇಲ್ದಾರ ಲಕ್ಷ್ಮಯ್ಯ ಮಾಡಿಕೊಟ್ಟಿರುವ ಖರೀದಿ ಪತ್ರದ ಮೂಲಕ ನನಗೆ ಯಾವುದೇ ಹಕ್ಕು ಪ್ರಾಪ್ತ ಆಗಿಲ್ಲಾ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿ ಸ್ವಾಧಿನ ಕೂಡ ಕೇಳಿಕೊಂಡಿಲ್ಲಾ ಎಂದರೆ ಕೇಳಿಕೊಂಡಿರುತ್ತೇನೆ ಎನ್ನುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.